
# ಜ್ಞಾನಶಕ್ತಿ
ಮಾಸ ಪತ್ರಿಕೆ

JNANASHAKTHI



## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

ಸಂಪುಟ - 14 Reg. No. : KARBIL / 2005 / 16123 ಜೂನ್ - 2025 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30–00 ಸಂಚಿಕೆ : 06 ಪ್ರಕಟಣೆ : 24–06–2025


## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ಪ್ರತಿಷ್ಠಿತ ಯೋಜನೆ ಪುತ್ತೂರಿನ ‘ಶಿವಸದನ’ಕ್ಕೆ ಸಹಾಯಹಸ್ತ




ಮಂಗಳೂರು ನಿವಾಸಿ ಕಡಬ ಶ್ರೀ ರಘುರಾಮ ರಾವ್, ಪತ್ನಿ ಶ್ರೀಮತಿ ಹರಿಣಾಕ್ಷಿ ಆರ್. ರಾವ್, ಪುತ್ರ ಶ್ರೀ ಕಿಶೋರ್ ರಾವ್ ಕಡಬ ಇವರು ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ ‘ಶಿವಸದನ’ಕ್ಕೆ ₹ 5,00,000/- (ರೂ. ಐದು ಲಕ್ಷ) ದೇಣಿಗೆ ನೀಡಿ ಒಂದು ಕೋಣೆಯನ್ನು ಪ್ರಾಯೋಜಿಸಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.





ಕುರಾಯ ಶಿವರಾಮ ಶಾಸ್ತ್ರಿ ಇವರ ಸ್ಮರಣಾರ್ಥ ಅವರ ಪತ್ನಿ ಶ್ರೀಮತಿ ಕೆ. ಎಸ್ .ಕಮಲಾ, ಪುತ್ರ ಶ್ರೀ ಕೆ.ಎಸ್. ರಾಮಸ್ವಾಮಿ ಮತ್ತು ಚೀಚಿ ಕೃಷ್ಣನ್ ಇವರು ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ‘ಶಿವಸದನ’ಕ್ಕೆ ₹ 2,00,000/- (ರೂ. ಎರಡು ಲಕ್ಷ) ದೇಣಿಗೆ ನೀಡಿದ್ದಾರೆ. ಈ ಹಿಂದೆ ಅವರು ₹ 3 ಲಕ್ಷ ನೀಡಿದ್ದು, ಒಟ್ಟು ₹ 5 ಲಕ್ಷ ನೀಡಿ ‘ಶಿವಸದನ’ದಲ್ಲಿ ಒಂದು ಕೋಣೆಯನ್ನು ಪ್ರಾಯೋಜಿಸಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

ಛಾಯಾಚಿತ್ರ : ಶ್ರೀ ರಘುವೀರ್ ಪೆರ್ಡೂರು



ಮಂಗಳೂರು ನಿವಾಸಿ ದಿ| ಪಿ. ರಾಘವ ಶರ್ಮ ಮತ್ತು ದಿ| ಕಿಶೋರಿ ಆರ್. ಶರ್ಮ ಇವರ ಸ್ಮರಣಾರ್ಥ ಪುತ್ರರಾದ ಶ್ರೀ ಮುರಳಿಕೃಷ್ಣ ಶರ್ಮ, ಸೊಸೆ ಶ್ರೀಮತಿ ಪೂರ್ಣಿಮಾ ಮತ್ತು ಮೊಮ್ಮಕ್ಕಳು ಮತ್ತು ಶ್ರೀ ಗೌತಮ್ ಶರ್ಮ, ಸೊಸೆ ಶ್ರೀಮತಿ ದಿವ್ಯ ಶರ್ಮ ಮತ್ತು ಮೊಮ್ಮಕ್ಕಳು ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ‘ಶಿವಸದನ’ಕ್ಕೆ ₹ 2,00,000/- (ರೂ. ಎರಡು ಲಕ್ಷ) ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.



ಗುಜರಾತಿನ ಬರೋಡ ನಿವಾಸಿ ಡಾ| ಐ. ಕೆ. ರಾಜಕುಮಾರ್, ಪತ್ನಿ ಶ್ರೀಮತಿ ಪೂರ್ಣಿಮಾ, ಅವರ ಪುತ್ರ ಡಾ| ಪರೀಕ್ಷಿತ್, ಸೊಸೆ ಡಾ| ಪಾಯಲ್, ಮೊಮ್ಮಗಳು ಕುಮಾರಿ ಅನಾಯ ಇವರು ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ‘ಶಿವಸದನ’ಕ್ಕೆ ₹ 50,101/- ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.



## ಶ್ರೀ ಸುಬ್ರಹ್ಮಣ್ಯ ಸಭಾ (ರಿ.)
ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಮಂಗಳೂರು





ಸಮಾಜ ಬಾಂಧವರೇ,

**ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ**

ತಾ. 20-07-2025ನೇ ಆದಿತ್ಯವಾರದಂದು

**‘ಆಟಿತೊ ಆಟ ಕೂಟ’**

ಎಂಬ ವಿಶಿಷ್ಟ ಕಾರ್ಯಕ್ರಮ ನಡೆಯಲಿದೆ. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿಸುತ್ತೇವೆ.

ಅಧ್ಯಕ್ಷರು ಮತ್ತು ಸರ್ವ ಸದಸ್ಯರು
ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು



### ಕಾರ್ಯಕ್ರಮಗಳು

| | |
|---|---|
| ಬೆಳಗ್ಗೆ 8-30ರಿಂದ : | ಉಪಾಹಾರ |
| ಬೆಳಗ್ಗೆ 9-00ರಿಂದ : | ಹಗ್ಗಜಿಗಿತ (ರೋಪ್ ಸ್ಕಿಪ್ಪಿಂಗ್), ಕಲ್ಲಾಟ (ಪೊಕ್ಕು) ಕೇರಂ ಪಂದ್ಯಾಟ, ಚೆಸ್ ಪಂದ್ಯಾಟ, ಚೆನ್ನೆಮಣೆ ಪಂದ್ಯಾಟ ಆರಂಭ (ಮುಕ್ತ ವಿಭಾಗ) |
| ಮಧ್ಯಾಹ್ನ 1-00ರಿಂದ : | ಆಟಿಯ ವಿಶೇಷ ಖಾದ್ಯಗಳನ್ನೊಳಗೊಂಡ ಭೋಜನ |
| ಮಧ್ಯಾಹ್ನ 2-00ರಿಂದ : | ಆಟಿಯ ವಿಶೇಷ ಕಾರ್ಯಕ್ರಮ |
| ಮಧ್ಯಾಹ್ನ 2-30ರಿಂದ : | ತುಳುನಾಡಿನ ಹಳ್ಳಿ ಉಡುಗೆ ಸ್ಪರ್ಧೆ (ಮುಕ್ತ ವಿಭಾಗ) |
| ಮಧ್ಯಾಹ್ನ 3-00ರಿಂದ : | ‘ಕರೋಕೆ’ ರಸಮಂಜರಿ – ಸಮಾಜದ ಪ್ರತಿಭೆಗಳಿಂದ (ಟ್ರಾಕ್‌ಗಳಿಗೆ ಮಾತ್ರ ಅವಕಾಶ) |
| ಸಂಜೆ 4-30ರಿಂದ : | ಬಹುಮಾನ ವಿತರಣೆ, ರಾಷ್ಟ್ರಗೀತೆ |



**ವಿಶೇಷ ಸೂಚನೆ :**
ಪಂದ್ಯಾಟದಲ್ಲಿ ಹಾಗೂ ‘ಕರೋಕೆ’ ರಸಮಂಜರಿಯಲ್ಲಿ ಭಾಗವಹಿಸುವವರು ದಯವಿಟ್ಟು ಮುಂಚಿತವಾಗಿ ತಮ್ಮ ಹೆಸರನ್ನು ನೋಂದಾಯಿಸಬೇಕಾಗಿ ವಿನಂತಿ.

ಹೆಚ್ಚಿನ ಮಾಹಿತಿಗಾಗಿ :
ಶ್ರೀ ಜನಕರಾಜ್ : 8494939446
ಶ್ರೀ ಸಾಯಿ ಪ್ರಸಾದ್ : 9980050591
ಶ್ರೀಮತಿ ಜಯಂತಿ ವಿ. ರಾವ್ : 9945742680
ಶ್ರೀಮತಿ ಶಕುಂತಲಾ ವಿ. ರಾವ್ : 9481973204

## ಜ್ಞಾನಶಕ್ತಿ ಮಾಸಪತ್ರಿಕೆ

ಪ್ರಧಾನ ಸಂಪಾದಕರು : ಎಂ. ಎಸ್. ರಘುನಾಥ ರಾವ್ ಪುತ್ತೂರು 9448481696

ಸಂಪಾದಕರು : ಪಿ. ಶ್ರೀಕಾಂತ್ ರಾವ್ 9343361618

ಸಂಪಾದಕ ಮಂಡಳಿ : • ನಾಗರಾಜ್ ವರ್ಕಾಡಿ

• ರಘುವೀರ್ ಪೆರ್ಡೂರು • ಟಿ. ಬಿ. ಮೋಹನ್ ರಾವ್ • ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ :

• ಉದಯ ಕುಮಾರ್ ಪಿ. • ಸಂತೋಷ್ ಕುಮಾರ್ ಯು.

• ಅನಿಲ್ ರಾವ್ ಬಿ. ಎಸ್.

ಗೌರವ ಸಲಹೆಗಾರರು : • ಚೇತನ್ ಶರ್ಮ • ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು : ಡಾ. ಎ. ಪಿ. ಕೃಷ್ಣ

: 7795116598 ✆ : 9343361618 e-mail : jnanashakthisss@gmail.com

## ಪುತ್ತೂರಿನಲ್ಲಿ ಸುಸಜ್ಜಿತ 'ಶಿವಸದನ'

### ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿ ನಿಲಯ

ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ'ದಲ್ಲಿ ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿ ನಿಲಯವಿದ್ದು, ಹಿರಿಯ ನಾಗರಿಕರ ವಸತಿನಿಲಯದಲ್ಲಿ 45ಕ್ಕೂ ಹೆಚ್ಚು ನಿವಾಸಿಗಳಿದ್ದು, ಇದೀಗ ವಿಕಲಚೇತನರ ವಿಶೇಷ ಶಾಲೆಗೆ (Day Care) ಮಕ್ಕಳ ದಾಖಲಾತಿ ಆರಂಭವಾಗಿದೆ. ನುರಿತ ಶಿಕ್ಷಕರಿಂದ ಇವರಿಗೆ ಹಲವಾರು ಚಟುವಟಿಕೆ, ಆಟ, ಪಾಠ, ಆರೈಕೆಗಳನ್ನು ಮಿತದರದಲ್ಲಿ ಒದಗಿಸಲಾಗುತ್ತಿದೆ. 25 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಸುಸಜ್ಜಿತ ವಸತಿನಿಲಯದಲ್ಲಿ ಉಳಿದು ಕೊಳ್ಳಲು ಹಾಗೂ ಸಣ್ಣ ಮಕ್ಕಳಿಗೆ ಬೆಳಗ್ಗೆ ಗಂಟೆ 7–00ರಿಂದ ಸಂಜೆ ಗಂಟೆ 7–00ರ ವರೆಗೆ ನೋಡಿಕೊಳ್ಳುವ (Day Care) ವ್ಯವಸ್ಥೆ ಇದೆ. ಆವಶ್ಯಕತೆ ಇರುವವರಿಗೆ ಈ ಮಾಹಿತಿ ಹಂಚಿಕೊಳ್ಳಲು ವಿನಂತಿಸುತ್ತೇವೆ ಮತ್ತು ನಿಮ್ಮ ಎಲ್ಲಾ whatsapp ಗ್ರೂಪ್‌ಗಳಿಗೆ ಈ ಮಾಹಿತಿ ತಲುಪಿಸಲು ವಿನಂತಿ.

**ಹೆಚ್ಚಿನ ಮಾಹಿತಿ :** ಶ್ರೀ ಕರುಣ್ ರಾವ್ ಬೆಳ್ಳೆ – 7337634359
ಶ್ರೀಮತಿ ಸುಮಂಗಲಾ ಪ್ರಭಾಕರ್ – 9844242442
ಶ್ರೀ ಪಿ. ಶ್ರೀಕಾಂತ್ ರಾವ್ – 7795116598

## ಕಾರ್ಪೊರೇಟ್ ಜಗತ್ತಿನಿಂದ 'ಮರಳಿಮಣ್ಣಿಗೆ' ಬಂದು ಕೃಷಿಯಲ್ಲಿ ಪಾರಮ್ಯವನ್ನು ಮೆರೆದು 'ಕೃಷಿ ಪಂಡಿತ' ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡ ಶ್ರೀ ಇನ್ನ ಚಂದ್ರಕಾಂತ ರಾವ್



ನಮ್ಮ ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಇದರ ಉಪಾಧ್ಯಕ್ಷರಾಗಿ ಸಭಾದ ಸರ್ವತೋಮುಖ ಬೆಳವಣಿಗೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ, ಓರ್ವ ವ್ಯಕ್ತಿ ಶ್ರೀ ಇನ್ನ ಚಂದ್ರಕಾಂತ ರಾಯರು. ಬಹುದೊಡ್ಡ ಬಹುರಾಷ್ಟ್ರೀಯ ಕಂಪನಿಯ ಅಧ್ಯಕ್ಷರಾಗಿ ಕಾರ್ಪೊರೇಟ್ ಜಗತ್ತಿಗೆ ಅಪೂರ್ವ ಕೊಡುಗೆಯನ್ನಿತ್ತವರು, ನಮ್ಮ ಸ್ಥಾನಿಕ ಸಮಾಜದವರು ಎನ್ನುವುದು ನಮಗೆ ಹೆಮ್ಮೆ ಮತ್ತು ಸಂತೋಷದ ವಿಷಯ.

ಓರ್ವ ಶ್ರೇಷ್ಠ ಅಧ್ಯಾಪಕರ ಮಗನಾಗಿರುವ ಶ್ರೀ ಚಂದ್ರಕಾಂತರನ್ನು ಊರಿನ ಮಣ್ಣಿನ ಗಂಧ ತನ್ನತ್ತ ಸೆಳೆಯಿತು. ತನ್ನ ವ್ಯವಹಾರ ಜೀವನದ ಉಡುಗೆ ತೊಡುಗೆಯನ್ನು ಬದಿಗಿರಿಸಿ, ಪಕ್ಕಾ ಕೃಷಿಕನಾಗಿ ರೂಪಾಂತರಗೊಂಡಿದ್ದು ಒಂದು ಅದ್ಭುತವೇ ಸರಿ. ಈ ಕೃಷಿಕನ ಪಯಣ ಸಾಗುತ್ತಾ ಸಾಗುತ್ತಾ ಇನ್ನ ಎಂಬ ಪುಟ್ಟ ಗ್ರಾಮದಲ್ಲಿ ಕೃಷಿ ಕ್ರಾಂತಿಗೆ ಮುನ್ನುಡಿ ಬರೆಯಿತು. ಅದರ ಫಲವಾಗಿ ಸುಂದರ ಬಹು ವಿಧದ ಹಣ್ಣುಗಳ ತೋಟ ನಳನಳಿಸಿತು. ಈ ಬೆಳವಣಿಗೆ, ಬದಲಾವಣೆ ಸರಕಾರದ ಗಮನಕ್ಕೂ ಬಂದು, **ಸರಕಾರ ಇವರನ್ನು 'ಕೃಷಿ ಪಂಡಿತ' ಎಂಬ ಬಿರುದಿನೊಂದಿಗೆ ಗೌರವಿಸಿತು.**

KRECಯಿಂದ ಇಂಜಿನಿಯರ್ ಪದವಿ ಪಡೆದ ಶ್ರೀಯುತ ಚಂದ್ರಕಾಂತ ಬಳಿಕ ಇಂಟರ್‌ನ್ಯಾಶನಲ್ ಸ್ಕೂಲ್‌ನಿಂದ ಮಾರ್ಕೆಟಿಂಗ್‌ನಲ್ಲಿ ಎಂ.ಬಿ.ಎ. ಪದವಿಯನ್ನೂ ಗಳಿಸಿದರು. ಓರ್ವ ಇಂಜಿನಿಯರ್, ಕೃಷಿಕನಾಗಿ ರೂಪಾಂತರಗೊಂಡು, ಆ ಹೊಸ ಕ್ಷೇತ್ರದಲ್ಲಿಯೂ ಸಾಧನೆಯನ್ನು ಮಾಡಿ ತೋರಿಸಿದರು ಎಂಬುದು ನಮಗೆಲ್ಲರಿಗೂ ಗರ್ವ ಮತ್ತು ಹೆಮ್ಮೆಯ ವಿಷಯವಾಗಿದೆ. ಇಂತಹ ಒಬ್ಬ ಸಾಧಕರು ನಮ್ಮೊಂದಿಗೆ ಸುಬ್ರಹ್ಮಣ್ಯ ಸಭಾದ ಕೆಲಸಗಳಲ್ಲಿ ಕೈಜೋಡಿಸುತ್ತಾರೆ – ಇದು ಒಂದು ಅಭಿಮಾನದ ಸಂಗತಿ. ಈ ಸಂದರ್ಭದಲ್ಲಿ ಸುಬ್ರಹ್ಮಣ್ಯ ಸಭಾದ ಎಲ್ಲ ಸದಸ್ಯರ ಪರವಾಗಿ ನಾನು ಶ್ರೀಯುತ ಚಂದ್ರಕಾಂತರನ್ನು ಹೃತ್ಪೂರ್ವಕವಾಗಿ ಅಭಿವಂದಿಸುತ್ತೇನೆ ಮತ್ತು ನಮ್ಮೆಲ್ಲರ ಪರವಾಗಿ ಅವರಿಗೆ ಇನ್ನೂ ಹೆಚ್ಚಿನ ಸಾಧನೆ ಮಾಡಲು, ಅದರಿಂದ ಸಿಗುವ ಸಂತೋಷವನ್ನು ನಮ್ಮೊಂದಿಗೆ ಹಂಚಿಕೊಳ್ಳಲು ಇನ್ನಷ್ಟು ಹೆಚ್ಚಿನ ಅವಕಾಶಗಳನ್ನು ದೇವರು ಒದಗಿಸಲಿ ಎಂದು ಪ್ರಾರ್ಥಿಸುತ್ತೇನೆ.

**ಡಾ. ಎ. ಪಿ. ಕೃಷ್ಣ**
ಅಧ್ಯಕ್ಷರು, ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು

M.Devanand bhat
Mob: 9845644556
9663993883
Shobha Digital Studio
Belavai 08258-276177
Moodabidri 9901995655
Yedapadavu 0824-2256374
mdevanandbhat@gmail.com

PREETHIKA AUTOMOBILES
✆ 2493633
9845851573
Wholesale & Retail Dealers in :
2 & 3 WHEELERS, SPARES & ACCESSORIES
KARANGALPADY, MANGALORE - 575 003
Dealers in :
Minda Switches, M. K. Products, Swiss Auto Products, Power Coils

Freelance Makeup & Hairstyle Artistry
Swapna_rao_makeoverartistry
BRIDAL / PRE / POST WEDDING FUNCTIONS / OTHER PERSONAL EVENTS & PARTIES
Rental Jewellery / Saree Pre-pleating Service available
For Bookings and Enquiries
Swapna Vallish : 9972465209 / 7892235761

ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : 9972989678
9448104174
ರವಿಕಿರಣ್ ಕ್ರೈಲ, ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

ಪತ್ರಿಕೆಗೆ ಶುಭ ಬಯಸುವ–
Dr. Jayalakshmi Devi
Dr. Jaganmohan, Smt. Asha Mohan
Akarsh M. Rao
Konchadi, Mangalore - 575 008

Prop. : SUDHAKAR BELLE
✆ : 9845193103/ 9481563103
KARAN DIGITAL STUDIO
Sadasukh Building
Nr. Postoffice, Padubidri - 574 111
Opp. Busstand
Belman
All Marriage & Other functions
Photography & Videography Available

# ಶ್ರೀ ಸುಬ್ರಹ್ಮಣ್ಯ ಸಭಾ (ರಿ), ಮಂಗಳೂರು

**ಕುಡ್ವಿ ಪದ್ಮನಾಭಯ್ಯ ಗಾರ್ಡನ್ಸ್**

**ಕರಂಗಲ್ಪಾಡಿ, ಬಿಜೈ ರಸ್ತೆ, ಮಂಗಳೂರು - 575 003**

## ಪ್ರಕಟಣೆ - 1

### ಸಾಮಾನ್ಯ ವಿದ್ಯಾರ್ಥಿವೇತನ - 2025-2026

2025–26ನೇ ಸಾಲಿನಲ್ಲಿ ಪಿಯುಸಿ ಮತ್ತು ಮೇಲ್ಪಟ್ಟ ತರಗತಿಗಳಲ್ಲಿ ಕಲಿಯುವ ನಮ್ಮ ಸಮಾಜದ ಆರ್ಥಿಕವಾಗಿ ದುರ್ಬಲರಾಗಿರುವ ಕುಟುಂಬಗಳಿಂದ ಬರುವ ಅರ್ಹ ವಿದ್ಯಾರ್ಥಿಗಳಿಂದ ಸಾಮಾನ್ಯ ವಿದ್ಯಾರ್ಥಿವೇತನವನ್ನು ಪಡೆಯಲು ಅರ್ಜಿಯನ್ನು ಆಹ್ವಾನಿಸಲಾಗಿದೆ.

ಅರ್ಜಿ ತಲುಪಬೇಕಾದ ಕೊನೆಯ ದಿನಾಂಕ **31-10-2025**. ಪೂರ್ಣ ಭರ್ತಿ ಮಾಡಿದ ಅರ್ಜಿಯನ್ನು **ಕಾರ್ಯದರ್ಶಿ, ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು** ಇವರಿಗೆ ಕಳುಹಿಸಿಕೊಡಲು ಕೋರಲಾಗಿದೆ. ***ಅರ್ಜಿಯೊಂದಿಗೆ ಹಿಂದಿನ ವರ್ಷದ ಅಂಕಪಟ್ಟಿಯ ಪ್ರತಿ ಹಾಗೂ ಈ ವರ್ಷದ ಕಲಿಕಾ ಪ್ರಮಾಣಪತ್ರವನ್ನು ಲಗ್ತೀಕರಿಸಬೇಕು.***

## ಪ್ರಕಟಣೆ - 2

### ಸಾಲ ವಿದ್ಯಾರ್ಥಿ ವೇತನ - 2025-2026

2025–26ನೇ ಸಾಲಿನಲ್ಲಿ ನಮ್ಮ ಸಮಾಜದ ಆರ್ಥಿಕವಾಗಿ ದುರ್ಬಲರಾಗಿರುವ ಕುಟುಂಬಗಳಿಂದ ಬರುವ ಅರ್ಹ ವಿದ್ಯಾರ್ಥಿಗಳಿಗೆ ಬಿ.ಇ., ಎಂ.ಇ, ಎಂ.ಬಿ.ಬಿ.ಎಸ್., ಬಿ.ಡಿ.ಎಸ್, ಪಾಲಿಟೆಕ್ನಿಕ್, ಐ.ಟಿ.ಐ, ಎಂ.ಎ, ಎಂ.ಎಸ್.ಸಿ., ಎಂ.ಕಾಂ., ಸಿ.ಎ., ಬಿ.ಎಡ್., ಡಿ.ಎಡ್. ಶಿಕ್ಷಣವನ್ನು ಪಡೆಯಲು ಸಾಲ ವಿದ್ಯಾರ್ಥಿವೇತನವನ್ನು ಶ್ರೀ ಸುಬ್ರಹ್ಮಣ್ಯ ಸಭೆಯು ವಿತರಿಸಲಿದೆ. ಈ ಸೌಲಭ್ಯವನ್ನು ಪಡೆಯಲು ಸಮಾಜದ ಅರ್ಹ ವಿದ್ಯಾರ್ಥಿಗಳಿಂದ ನಿಗದಿಪಡಿಸಿದ ಫಾರಂನಲ್ಲಿ ಅರ್ಜಿಯನ್ನು **ಕಾರ್ಯದರ್ಶಿ, ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು** ಇವರಿಗೆ ಕಳುಹಿಸಿಕೊಡಲು ಕೋರಲಾಗಿದೆ.

***ಅರ್ಜಿಯೊಂದಿಗೆ ಹಿಂದಿನ ವರ್ಷದ ಅಂಕಪಟ್ಟಿಯ ಪ್ರತಿ ಹಾಗೂ ಈ ವರ್ಷದ ಕಲಿಕಾ ಪ್ರಮಾಣಪತ್ರವನ್ನು ಲಗ್ತೀಕರಿಸಬೇಕು.***

ಈ ಹಿಂದೆ ಸಾಲ ವಿದ್ಯಾರ್ಥಿವೇತನವನ್ನು ಪಡೆದುಕೊಂಡ ವಿದ್ಯಾರ್ಥಿಗಳು ಶಿಕ್ಷಣವನ್ನು ಮುಂದುವರಿಸಲು 2025–2026ನೇ ಸಾಲಿನ ಕಂತನ್ನು ಪಡೆಯಲು ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ, ಮಂಗಳೂರು ಇವರನ್ನು ಸಂಪರ್ಕಿಸಲು ಕೋರಲಾಗಿದೆ.

**ಅರ್ಜಿ ನಮೂನೆಗಳು ಸಿಗುವ ಸ್ಥಳಗಳು**

1. **ಶ್ರೀ ಸುಬ್ರಹ್ಮಣ್ಯ ಸಭಾದ ಕಛೇರಿ**
2. **ಸುಬ್ರಹ್ಮಣ್ಯ ಸಹಕಾರ ಸಂಘದ ಮುಖ್ಯ ಶಾಖೆ, ಮಂಗಳೂರು**
3. **ಸುಬ್ರಹ್ಮಣ್ಯ ಸಹಕಾರ ಸಂಘದ ಎಲ್ಲಾ ಶಾಖೆಗಳು**
4. **ಶ್ರೀ ಸುಬ್ರಹ್ಮಣ್ಯ ಸಭಾದ ವೆಬ್‌ಸೈಟ್**
   **https://subramanyasabha.com**ನಲ್ಲಿ Download option
5. Whatsappನಲ್ಲಿ ಪಡೆಯಲು 1. **ಡಾ. ಎ. ಪಿ. ಕೃಷ್ಣ** – 9845213997
   2. **ಪಿ. ಉದಯಕುಮಾರ್ ರಾವ್** – 9480328030

***ವಿ. ಸೂ. : ಅರ್ಜಿ ನಮೂನೆಯನ್ನು, ಕೆಲಬದಲಾವಣೆಯೊಂದಿಗೆ ಪರಿಷ್ಕರಿಸಲಾಗಿದೆ. ನಿಮ್ಮ ಅರ್ಜಿಗಳನ್ನು ಹೊಸ ಅರ್ಜಿ ನಮೂನೆಗಳಲ್ಲಿ ಮಾತ್ರ ಕಳುಹಿಸಿ. ಬೇರೆ ರೀತಿಯಲ್ಲಿ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.***

## ಪ್ರಕಟಣೆ - 3

ಶ್ರೀ ಕೂಡ್ಲು ವಿಷ್ಣು ಶಾನ್‌ಭಾಗರು ತಮ್ಮ ಪತ್ನಿ ಶ್ರೀಮತಿ ಕೂಡ್ಲು ಪ್ರೇಮಾವತಿ ಅಮ್ಮ ಸ್ಮಾರಕ ನಿಧಿಯನ್ನು ರೂ. 1,05,000/– ವಂತಿಗೆಯೊಂದಿಗೆ ಸ್ಥಾಪಿಸಿ ವೈದ್ಯಕೀಯ ಶಿಕ್ಷಣ ಪಡೆಯುವ ನಮ್ಮ ಸಮಾಜದ ಆಯ್ದ ಓರ್ವ ವಿದ್ಯಾರ್ಥಿಗೆ ಪ್ರೋತ್ಸಾಹಧನವನ್ನು ಕೊಡಲು ಬಯಸಿದ್ದಾರೆ. ಅಂತೆಯೇ ಅವರು ತಮ್ಮ ಪುತ್ರ ಕೂಡ್ಲು ಕೇಶವ ಶಾನುಭಾಗರ ಸ್ಮಾರಕ ನಿಧಿಯನ್ನು ರೂ. 1,00,000/– ವಂತಿಗೆಯೊಂದಿಗೆ ಸ್ಥಾಪಿಸಿ CA ಕಲಿಯುವ ಸಮಾಜದ ಆಯ್ದ ಓರ್ವ ವಿದ್ಯಾರ್ಥಿಗೆ ಪ್ರೋತ್ಸಾಹಧನವನ್ನು ಕೊಡಲು ಬಯಸಿದ್ದಾರೆ.

2025–2026ನೇ ಸಾಲಿನ ಮೇಲಿನ ಎರಡು ನಿಧಿಗಳ ಪ್ರೋತ್ಸಾಹಧನವನ್ನು ಶ್ರೀ ಸಭೆಯಲ್ಲಿ ಸ್ಕಾಲರ್ಸ್ ಡೇ ಸಂದರ್ಭದಲ್ಲಿ ವಿತರಿಸಲಾಗುವುದು. ಆದುದರಿಂದ ಸಮಾಜದ ಅರ್ಹ ವಿದ್ಯಾರ್ಥಿಗಳು ಮೇಲಿನ ಪ್ರೋತ್ಸಾಹಧನಕ್ಕೆ ಅರ್ಜಿಯನ್ನು ತಾ. 31–10–2025ರ ಒಳಗೆ ತಲುಪುವಂತೆ **ಕಾರ್ಯದರ್ಶಿ, ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು** ಇವರಿಗೆ ಕಳುಹಿಸಿಕೊಡಲು ಕೋರಲಾಗಿದೆ. ಸ್ಕಾಲರ್‌ಶಿಪ್‌ಗಾಗಿ ಉಪಯೋಗಿಸುವ ಅರ್ಜಿಯನ್ನೇ ಇದಕ್ಕೂ ಉಪಯೋಗಿಸಲು ವಿನಂತಿ. ಅರ್ಜಿ ನಮೂನೆಗಳನ್ನು ಶ್ರೀ ಸುಬ್ರಹ್ಮಣ್ಯ ಸಭಾದ ವೆಬ್‌ಸೈಟ್ **https://subramanyasabha.com**ನಲ್ಲಿ Downloadsನಿಂದಲೂ ಪಡೆಯಬಹುದು. ***ಅರ್ಜಿಯೊಂದಿಗೆ ಹಿಂದಿನ ವರ್ಷದ ಅಂಕಪಟ್ಟಿಯ ಪ್ರತಿ ಹಾಗೂ ಈ ವರ್ಷದ ಕಲಿಕಾ ಪ್ರಮಾಣಪತ್ರವನ್ನು ಲಗ್ತೀಕರಿಸಬೇಕು.***

**ಶ್ರೀ ಪಿ. ಉದಯಕುಮಾರ ರಾವ್**, ಕಾರ್ಯದರ್ಶಿ


# ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.)

**'ಶ್ರೀ ಕುಡ್ವಿ ಪದ್ಮನಾಭಯ್ಯ ಗಾರ್ಡನ್ಸ್' ಬಿಜೈ ರಸ್ತೆ, ಮಂಗಳೂರು - 575 003**

**ಶಾಖೆಗಳು** ✆ : **9880968032 / 0824-2982095**


ಮಂಗಳೂರು : ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ
✆ : 0824 - 2491895 / 8861155454
ಪುತ್ತೂರು : ವಾಣಿಜ್ಯ ಸಂಕೀರ್ಣ ಒಂದನೇ ಮಹಡಿ, ತಾಲೂಕು ಕಚೇರಿ ರಸ್ತೆ
✆ : 08251 - 235895 / 8123659955
ಬೆಳ್ತಂಗಡಿ : 'ಬೃಂದಾವನ', ಸಂತೆಕಟ್ಟೆ (ಬಸ್‌ಸ್ಟಾಂಡ್ ಎದುರು)
✆ : 08256 - 234076 / 8867269944
ಸುರತ್ಕಲ್ : 'ಪೂವ ಆರ್ಕೇಡ್' ✆ : 0824 - 2477895 / 9611550803
ಕಾರ್ಕಳ : 'ಶ್ರೀ ಶಂಕರ', ಪ್ರಸಾದ್ ಭವನ ಕಂಪೌಂಡು
ಅನಂತಶಯನ ದೇವಸ್ಥಾನದ ಹತ್ತಿರ, ತೆಳ್ಳಾರ್ ರೋಡ್
✆ : 08258 - 235544 / 9980528800
ಸುಳ್ಯ : ಶ್ರೀ ಗಣೇಶ ವಾಣಿಜ್ಯ ಸಂಕೀರ್ಣ, ಹಳೇ ಬಸ್‌ಸ್ಟಾಂಡ್ ಎದುರು
✆ : 08257 - 233895 / 8147539955
ಬಿ.ಸಿ. ರೋಡ್ : ಲಕ್ಷ್ಮೀ ಮಹಲ್ ✆ : 08255 - 233895 / 8792464344
ವಿಟ್ಲ : ಅಪ್ಪಾಜಿ ರಾವ್ ಕಾಂಪ್ಲೆಕ್ಸ್, ಖಾಸಗಿ ಬಸ್‌ನಿಲ್ದಾಣದ ಬಳಿ
✆ : 08255 - 239895 / 8147469955
ಮೂಡಬಿದ್ರೆ : ವಾಸುದೇವ ಕಾಂಪ್ಲೆಕ್ಸ್, ಯೂನಿಯನ್ ಬ್ಯಾಂಕ್ ಮೇಲುಗಡೆ
✆ : 08258 - 200161 / 8147549955
ಪದವಿನಂಗಡಿ : ಶ್ರೀ ವೆಂಕಟರಮಣ ದೇವಸ್ಥಾನದ ಹಿಂಭಾಗ
✆ : 9731405917
ಕುತ್ತಾರ್ : ಹಸನ್ ಎನ್‌ಕ್ಲೇವ್, ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ ಬಳಿ
✆ : 8792034344
ಕಿನ್ನಿಗೋಳಿ : ಡೈಮಂಡ್ ಆರ್ಕೇಡ್ ಕಟ್ಟಡ, ಕಿನ್ನಿಗೋಳಿ ಬಸ್‌ಸ್ಟಾಂಡ್ ಹತ್ತಿರ
✆ : 8197677575
ಪಡೀಲ್ ಪುತ್ತೂರು : ವಿಜಯಲಕ್ಷ್ಮೀ ಕಾಂಪ್ಲೆಕ್ಸ್ ✆ : 9740775967
ಕೊಕ್ರಾಡಿ : ವೃದ್ಧಿ ಕಾಂಪ್ಲೆಕ್ಸ್, ಜಂತಿಗೋಳಿ ಕ್ರಾಸ್, ಬೆಳ್ತಂಗಡಿ
✆ : 9741443470
ಕುಂಜತ್‌ಬೈಲ್ : ನಮ್ರದೀಪ್ ಕಾಂಪ್ಲೆಕ್ಸ್, ಕೋಸ್ಟಲ್ ಗಾರ್ಡ್ ಎದುರು
✆ : 9740925733
ಕೋಡಿಕ್ಕಲ್ : ಸುಗಂಧಿ ಪರ್ಲ್ಸ್, ಮೈನ್ ರೋಡ್, 7th ಕ್ರಾಸ್, ಮಂಗಳೂರು
✆ : 9945916755

**ಆಕರ್ಷಕ ಪ್ರತಿಫಲದ ನಮ್ಮ ಠೇವಣಿ ಯೋಜನೆಗಳು**

| ನಿರಖು ಠೇವಣಿ (F.D.) | | |
|---|---|---|
| 45 ದಿನಗಳಿಂದ 180 ದಿನಗಳ ವರೆಗೆ | - | 5% |
| 181 ದಿನಗಳಿಂದ 394 ದಿನಗಳ ವರೆಗೆ | - | 6% |
| 13 ತಿಂಗಳು ಮೇಲ್ಪಟ್ಟು | - | 9% |
| ಹಿರಿಯ ನಾಗರಿಕರಿಗೆ, ಸಂಘ–ಸಂಸ್ಥೆಗಳಿಗೆ 0.5% ಹೆಚ್ಚುವರಿ ಬಡ್ಡಿ | | |

| ಶ್ರೀ ಸುಬ್ರಹ್ಮಣ್ಯ ನಗದು ಪತ್ರ (CASH CERTIFICATE) ANNUALISED | | |
|---|---|---|
| ಆವರ್ತನ ಖಾತೆ (RECURRING DEPOSIT) | - | 8% |
| ಉಳಿತಾಯ ಖಾತೆ (SAVINGS BANK) | - | 3% |
| ಮಧುಸಂಚಯ ಖಾತೆ (PIGMY DEPOSIT) | - | 3% |

**FIXED DEPOSIT**
ಠೇವಣಿಗಳ ಮೇಲೆ **9.5%**
ಹಿರಿಯ ನಾಗರಿಕರಿಗೆ 0.5% ಹೆಚ್ಚುವರಿ ಬಡ್ಡಿ
ಆಕರ್ಷಕ ಬಡ್ಡಿದರಗಳು



**ಚಿನ್ನಾಭರಣ ಸಾಲ**
ಪ್ರತಿ ಗ್ರಾಂ ಗೆ ₹ **6,800/-**ರ ತನಕ

**ನಿಮ್ಮ ಹೂಡಿಕೆಗಳು**
**ಕೇವಲ 88 ತಿಂಗಳಲ್ಲಿ**
**ದ್ವಿಗುಣವಾಗುವುದು**

**ಲಕ್ಷಾಧೀಶ ಯೋಜನೆ**
**ರೂ. 1,00,000/-**

ಪ್ರತಿ ತಿಂಗಳಿಗೆ ರೂ. 1,350 ತೊಡಗಿಸಿ 60 ತಿಂಗಳಲ್ಲಿ
ಪ್ರತಿ ತಿಂಗಳಿಗೆ ರೂ. 2,450 ತೊಡಗಿಸಿ 36 ತಿಂಗಳಲ್ಲಿ
ಪ್ರತಿ ತಿಂಗಳಿಗೆ ರೂ. 3,800 ತೊಡಗಿಸಿ 24 ತಿಂಗಳಲ್ಲಿ




ಪತ್ರಿಕೆಗೆ ಶುಭ ಬಯಸುವ –

**ಇನ್ನ ಶ್ರೀನಿವಾಸ ರಾವ್ ಹಾಗೂ**
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**
**ಮತ್ತು ಕುಟುಂಬ**

ಶ್ರೀ ಗಣೇಶ ಕೃಪಾ, ಪೃಥ್ವೀ ಲೇ ಔಟ್, ಕೂಳೂರು, ಮಂಗಳೂರು - 575 013

## ಪುತ್ತೂರಿನ 'ಶಿವಸದನ'ಕ್ಕೆ ದೇಣಿಗೆ



ಮಂಗಳೂರಿನ ಖ್ಯಾತ ವಕೀಲರಾದ ಶ್ರೀ ಪ್ರವೀಣ್ ಅದ್ಯಪಾಡಿ ಮತ್ತು ಶ್ರೀಮತಿ ಮಂಜುಳಾ ಪ್ರವೀಣ್ ದಂಪತಿಗಳು ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ'ಕ್ಕೆ ರೂ. 10,000/– ದೇಣಿಗೆ ನೀಡಿದ್ದಾರೆ. ಈ ಹಿಂದೆ ಅವರು ರೂ. 25,000/– ನೀಡಿದ್ದು, ಒಟ್ಟು ರೂ. 35,000/– ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.



ಶ್ರೀ ವಾಸು ಭಟ್ ಮತ್ತು ಶ್ರೀಮತಿ ಚಂದ್ರಮ್ಮ ಸ್ಮಾರಕ ಮಹಿಳಾ ಮಂಡಳಿ, ಪಾವಂಜೆಯ ಭಜನಾ ಸದಸ್ಯರು ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ'ಕ್ಕೆ ರೂ. 10,000/– ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.



ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಮೆನೇಜರ್ ಆಗಿದ್ದ ಶ್ರೀ ಉಮಾಕಾಂತ ಶರ್ಮರು ತನ್ನ 80ನೇ ಹುಟ್ಟುಹಬ್ಬ ಸಂದರ್ಭದಲ್ಲಿ ಶ್ರೀ ಸತ್ಯನಾರಾಯಣ ಪೂಜೆಯನ್ನು ನೆರವೇರಿಸಿ ಬಂಧು–ಬಾಂಧವರೊಂದಿಗೆ ಮಧ್ಯಾಹ್ನ ಪ್ರಸಾದ ಭೋಜನ ವ್ಯವಸ್ಥೆ ಮಾಡಿದ್ದರು. ಆ ಸಂದರ್ಭದಲ್ಲಿ ಶ್ರೀ ಶಾರದಾಂಬ ಭಜನಾ ಮಂಡಳಿಯ ಸದಸ್ಯರಿಂದ ಭಕ್ತಿಪೂರ್ವಕ ಭಜನಾ ಕಾರ್ಯಕ್ರಮ ನಡೆಸಲಾಯಿತು. ಭಜನಾ ಮಂಡಳಿಯ ಅಗತ್ಯ ವಸ್ತುಗಳ ಖರೀದಿಗಾಗಿ ರೂ. 5,000/–ವನ್ನು ಶ್ರೀ ಶರ್ಮರು ಮಂಡಳಿಗೆ ನೀಡಿದರು. ಸುಬ್ರಹ್ಮಣ್ಯ ಸಭಾದ ಆಡಳಿತ ಮಂಡಳಿಯಿಂದ ಅವರಿಗೆ ಶಾಲು ಹೊದಿಸಿ, ಹೂಗುಚ್ಛ ನೀಡಿ ಶುಭ ಹಾರೈಸಿದರು.

ರಾಮಾ ಅಟೋಮೊಬೈಲ್ಸ್



ಮಾರುತಿ ವಾಹನ ತಜ್ಞರು



ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

*Manish Rao U.*
Tel : (O) 2223301
Mobile : 9448726499 / 8884284939

**NAVA COMPUTERS**



Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services

1st Floor, Bharath Building, P. M. Rao Road, Hampankatta, Mangaluru - 575 001

## ಸಾಲ ವಿದ್ಯಾರ್ಥಿವೇತನ ಮತ್ತು LAPTOP ವಿತರಣೆ ಹಾಗೂ ವೇದ ಮತ್ತು ಸಂಸ್ಕೃತ ಕಲಿಕೆಗೆ ಪ್ರೋತ್ಸಾಹಧನ ವಿತರಣಾ ಸಮಾರಂಭ

ಹೆಜಮಾಡಿ ಕೀರ್ತಿಶೇಷ ವೆಂಕಪ್ಪಯ್ಯ ಕೃಷ್ಣರಾವ್ ಇವರ ಧರ್ಮಪತ್ನಿ ಶ್ರೀಮತಿ ವಿಜಯ ವಿ. ಕೆ. ರಾವ್ ತಮ್ಮ ಪುತ್ರ ಶ್ರೀ ರೋಹಿತ್ ರಾವ್ ಮತ್ತು ಸೊಸೆ ಶ್ರೀಮತಿ ಕಲ್ಪನಾ ರಾವ್ ಎಚ್. ಇವರು ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ 'ಶ್ರೀ ಹೆಜಮಾಡಿ ವೆಂಕಪ್ಪಯ್ಯ ಕೃಷ್ಣರಾವ್ ಸ್ಮಾರಕ ಲೋನ್ ಸ್ಕಾಲರ್‌ಶಿಪ್ ನಿಧಿ'ಯನ್ನು ಕಳೆದ ವರ್ಷ ರೂ. 2,25,000/– ನೀಡಿ ಸ್ಥಾಪಿಸಿದ್ದು, ಈ ವರ್ಷ ರೂ. 50,000–00 ನೀಡಿದ್ದು, ಒಟ್ಟು ಮೊತ್ತ ರೂ. 2,75,000/–ಕ್ಕೆ ಹೆಚ್ಚಿಸಿರುವರು. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತ ಧನ್ಯವಾದಗಳು. ಇದೇ ತಾ. 2–02–2025ರಂದು ನಡೆದ 'ಸ್ಕಾಲರ್ಸ್ ಡೇ' ದಿನದಂದು ಶ್ರೀ ಸುಬ್ರಹ್ಮಣ್ಯ ಸಭಾ ವತಿಯಿಂದ 114 ವಿದ್ಯಾರ್ಥಿಗಳಿಗೆ ಒಟ್ಟು ರೂ. 5,31,500/– ಸ್ಕಾಲರ್‌ಶಿಪ್ ವಿತರಿಸಲಾಗಿದೆ. ಇದರಲ್ಲಿ ವಿಶೇಷವಾಗಿ ವೇದ ಮತ್ತು ಸಂಸ್ಕೃತ ಕಲಿಕೆಯನ್ನು ಉತ್ತೇಜಿಸಲು ವಿದ್ಯಾರ್ಥಿ ವೇತನ ನೀಡಲಾಗಿದೆ. 70 ವಿದ್ಯಾರ್ಥಿಗಳಿಗೆ ರೂ. 71,80,000/– ಸಾಲ ವಿದ್ಯಾರ್ಥಿವೇತನ ನೀಡಲಾಗಿದೆ ಹಾಗೂ 11 ವಿದ್ಯಾರ್ಥಿಗಳಿಗೆ ರೂ. 1,80,000/– ಮೌಲ್ಯದ ಲ್ಯಾಪ್‌ಟಾಪನ್ನು ವಿತರಿಸಲಾಗಿದೆ.



ಮಂಗಳೂರು ಮಣ್ಣಗುಡ್ಡೆ ನಿವಾಸಿ ಶ್ರೀಮತಿ ಲಕ್ಷ್ಮಿ ಮತ್ತು ಶ್ರೀ ಬೋಳ ಗುಂಡೂರಾವ್ ಸ್ಮರಣಾರ್ಥ ಅವರ ಮಗಳು ಶ್ರೀಮತಿ ಇಂದುಮತಿ ಶಾಸ್ತ್ರಿ ಮತ್ತು ಅಳಿಯ ಶ್ರೀ ಸದಾಶಿವ ಶಾಸ್ತ್ರಿ ತಲಾ ರೂ. 1,00,000/– ನೀಡಿ ಒಟ್ಟು ರೂ. 2,00,000/– ಸಾಲ ವಿದ್ಯಾರ್ಥಿವೇತನ ನಿಧಿಯನ್ನು ಶ್ರೀ ಸಭಾದಲ್ಲಿ ಸ್ಥಾಪಿಸಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತ ಧನ್ಯವಾದಗಳು.

## 'ಕಂಪ್ಯೂಟರ್ ಶಿಕ್ಷಣ ನಿಧಿ'



ಶ್ರೀ ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲ ಪ್ರಭಾಕರ್ ಮೂಲನಿಧಿಯಾಗಿ ರೂ. 1,10,000/–ವನ್ನು ದೇಣಿಗೆ ನೀಡಿ 'ಕಂಪ್ಯೂಟರ್ ಶಿಕ್ಷಣ ನಿಧಿ'ಯನ್ನು ಸ್ಥಾಪಿಸಿದ್ದು ಆ ನಿಧಿಯ ಮೊತ್ತವನ್ನು ಆಸಕ್ತ ಸಮಾಜ ಬಾಂಧವರ ನೆರವಿನಿಂದ ಕನಿಷ್ಠ ರೂ. 10 ಲಕ್ಷಕ್ಕೆ ಹೆಚ್ಚಿಸುವ ಉದ್ದೇಶವಿದ್ದು ಇಂತಹ ಸಮಾಜಮುಖೀ ಕಾರ್ಯಕ್ಕೆ ಸಹಕರಿಸಿದವರು.

| | | | |
|---|---|---|---|
| ಡಾ। ಜಯಲಕ್ಷ್ಮಿ ರಾವ್ | – | ರೂ. | 10,000/– |
| ಸಾಂತೂರು ಶ್ರೀ ಭಾಗ್ಯಚಂದ್ರ ರಾವ್ | – | ರೂ. | 1,00,000/– |
| ಶ್ರೀಮತಿ ಸುಮಂಗಲ ಪ್ರಭಾಕರ್ | – | ರೂ. | 10,000/– |
| ಶ್ರೀಮತಿ ರತ್ನ ರಾಜೇಂದ್ರ | – | ರೂ. | 5000/– |
| ಶ್ರೀ ಶ್ರೀನಿವಾಸ ರಾವ್ ಮತ್ತು ಶ್ರೀಮತಿ ಪುಷ್ಪಾವತಿ | – | ರೂ. | 10,000/– |
| ಬಾಕಿ ಉಳಿದ ಮೊತ್ತ | – | ರೂ. | 7,55,000/– |

ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ವಂದನೆಗಳು.

ಪತ್ರಿಕೆಗೆ ಶುಭ ಬಯಸುವ–
ಡಾ. ದಿವಾಕರ್ ರಾವ್ ಹಾಗೂ
ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003

## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



**ಶ್ರೀ ಬಿ. ವಿಕ್ರಮ್ ರಾವ್** (74) ತಾ. 27–5–2025ನೇ ಮಂಗಳವಾರ ಬೆಂಗಳೂರಿನಲ್ಲಿ ನಿಧನರಾದರು. ಅವರು ಪತ್ನಿ ಮತ್ತು ಪುತ್ರನನ್ನು ಅಗಲಿದ್ದಾರೆ.

•••



**ಶ್ರೀ ಉಚ್ಚಿಲ ಕುಮಾರಸ್ವಾಮಿ (76)** ತಾ. 12–6–2025ನೇ ಗುರುವಾರ ಮುಂಬಯಿಯಲ್ಲಿ ನಿಧನರಾದರು. ಅವರು ಪತ್ನಿ ಮತ್ತು ಇಬ್ಬರು ಪುತ್ರರನ್ನು ಅಗಲಿದ್ದಾರೆ.

•••



ಮಸ್ಕಿಬೈಲು ದಿ| ನಾಗಪ್ಪಯ್ಯ ಇವರ ಧರ್ಮಪತ್ನಿ **ಶ್ರೀಮತಿ ಭಾಗೀರಥಿ** (83) ತಾ. 6–6–2025ನೇ ಶುಕ್ರವಾರ ನಿಧನರಾದರು. ಇವರು ನಾಲ್ವರು ಪುತ್ರರು ಮತ್ತು ನಾಲ್ವರು ಪುತ್ರಿಯರನ್ನು ಅಗಲಿದ್ದಾರೆ.

•••



ದಿ| ಸಾಂತೂರು ಸುಬ್ರಹ್ಮಣ್ಯ ರಾವ್ ಇವರ ಧರ್ಮಪತ್ನಿ **ಶ್ರೀಮತಿ ವೇದವಲ್ಲಿ** (70) ತಾ. 4–06–2025ನೇ ಬುಧವಾರ ಬೆಂಗಳೂರಿನಲ್ಲಿ ನಿಧನರಾದರು. ಅವರು ಓರ್ವ ಪುತ್ರಿಯನ್ನು ಅಗಲಿದ್ದಾರೆ.

•••



**ಶ್ರೀಮತಿ ಸರೋಜಿನಿ ಶಂಕರ ರಾವ್** (81)**,** ಉಡುಪಿ ಕುಕ್ಕಿಕಟ್ಟೆ ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿ ದೇವಳದ ಆಡಳಿತ ಮೊಕ್ತೇಸರರಾದ ಶ್ರೀ ಶಶೀಂದ್ರ ಅವರ ಮಾತೃಶ್ರೀ ಅವರು ತಾ. 02–06–2025ನೇ ಸೋಮವಾರ ಉಡುಪಿಯಲ್ಲಿ ನಿಧನರಾದರು. ಅವರು ಮೂವರು ಪುತ್ರರು ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ.

•••



**ಆಡೂರು ಮಿತ್ತೊಟ್ಟಿ ಶ್ರೀ ಸುಬ್ಬಾ ರಾವ್** (90) ತಾ. 28–5–2025ನೇ ಬುಧವಾರ ನಿಧನರಾದರು. ಅವರು ಓರ್ವ ಪುತ್ರ ಮತ್ತು ಆರು ಪುತ್ರಿಯರನ್ನು ಅಗಲಿದ್ದಾರೆ.

•••



**ಕದ್ರಿ ಗೋಪಾಲಕೃಷ್ಣ ರಾವ್** (67) ತಾ. 28–5–2025ನೇ ಬುಧವಾರ ನಿಧನರಾದರು. ಅವರು ಓರ್ವ ಪುತ್ರನನ್ನು ಅಗಲಿದ್ದಾರೆ.

•••



**ಶ್ರೀ ಹರೀಶ್ ರಾವ್** ವಿ. ತಾ 27–5–2025ನೇ ಮಂಗಳವಾರ ವಿಟ್ಲದಲ್ಲಿ ನಿಧನರಾದರು. ಇವರು ಪತ್ನಿ ಮತ್ತು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

•••



**ಮಸ್ಕಿಬೈಲ್ ಶ್ರೀಮತಿ ಸುಮತಿ ರಾವ್** (82) ತಾ. 20–5–2025ನೇ ಮಂಗಳವಾರ ನಿಧನರಾದರು. ಅವರು ಪತಿ ಶ್ರೀ ರಮೇಶ್ ರಾವ್ ಇವರನ್ನು ಅಗಲಿದ್ದಾರೆ.

•••




**ಶ್ರೀ ರಾಧಾಕೃಷ್ಣ ರಾವ್, ಕಾಂಡಿಲ** (67) ತಾ. 23–5–2025ನೇ ಶುಕ್ರವಾರ ನಿಧನರಾದರು. ಅವರು ಮಂಗಳೂರಿನ ಬದ್ರಿಯಾ ಜೂನಿಯರ್ ಕಾಲೇಜಿನಲ್ಲಿ 37 ವರ್ಷ ಕಾಮರ್ಸ್ ಪ್ರೊಫೆಸರ್ ಆಗಿ ಸೇವೆಸಲ್ಲಿಸಿ, ಉಪಪ್ರಾಂಶುಪಾಲರಾಗಿ ನಿವೃತ್ತರಾಗಿದ್ದಾರೆ. ಅವರು ಪತ್ನಿ, ಇಬ್ಬರು ಪುತ್ರರನ್ನು ಅಗಲಿದ್ದಾರೆ.

•••



ದಿ| ಐ. ಕೆ. ಜಗದೀಶ್ಚಂದ್ರ ಇವರ ಧರ್ಮಪತ್ನಿ **ಶ್ರೀಮತಿ ಶೈಲಜಾ** (87) ತಾ. 17–05–2025ನೇ ಶುಕ್ರವಾರ ಮಂಗಳೂರಿನಲ್ಲಿ ನಿಧನರಾದರು. ಅವರು ಓರ್ವ ಪುತ್ರ ಮತ್ತು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

ಪತ್ರಿಕೆಗೆ ಶುಭ ಬಯಸುವ–



**ಶ್ರೀ ನಾಗರಾಜ್ ಶರ್ಮ**
ಹಾಗೂ
**ಶ್ರೀಮತಿ ಆರತಿ ಶರ್ಮ**
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216



**PRAMOD**
**AUTOMOBILES**
30 Years of Service
KARANGALPADY Ph. : 2493633 (O)
2212723 (R)
MANGALORE- 575 003 M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR

## ರಾಂ ಎಲ್ಲಂಗಳ ಅವರಿಗೆ 'ರಂಗ ಚಿನ್ನಾರಿ' ಪ್ರಶಸ್ತಿ



ಗಡಿನಾಡು ಕಾಸರಗೋಡಿನ ಸಾಮಾಜಿಕ, ಸಾಂಸ್ಕೃತಿಕ ಸಂಸ್ಥೆಯಾದ ರಂಗ ಚಿನ್ನಾರಿ ಕಾಸರಗೋಡು ಇದರ 19ನೇ ವಾರ್ಷಿಕೋತ್ಸವ ಮತ್ತು ರಂಗ ಚಿನ್ನಾರಿ ಪ್ರಶಸ್ತಿ ಪ್ರದಾನ ಸಮಾರಂಭ 24 ಮೇ 2025ರಂದು ಕಾಸರಗೋಡಿನ 'ಪದ್ಮಕಲಾ ಕುಟೀರ'ದಲ್ಲಿ ನಡೆಯಿತು. ಈ ವೇಳೆ ನಾಟಕ ಮತ್ತು ಸಾಹಿತ್ಯ ಕ್ಷೇತ್ರದಲ್ಲಿನ ಸಾಧನೆಗಾಗಿ ಸಾಹಿತಿ, ಚಿಂತಕ, ವ್ಯಂಗ್ಯಚಿತ್ರಕಾರ ರಾಂ ಎಲ್ಲಂಗಳ ಅವರಿಗೆ ಈ ಸಲದ 'ರಂಗ ಚಿನ್ನಾರಿ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ನಟ, ರಂಗಕರ್ಮಿ ಕಾಸರಗೋಡು ಚಿನ್ನಾ ಸಾರಥ್ಯದಲ್ಲಿ ನಡೆದ ಸಮಾರಂಭದಲ್ಲಿ ಎಡನೀರು ಮಠಾಧೀಶರಾದ ಶ್ರೀ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿಯವರು ಉಪಸ್ಥಿತರಿದ್ದು ಆಶೀರ್ವಚನ ನೀಡಿದರು. ಇತರ ವಿಭಾಗಗಳಲ್ಲಿ ಪ್ರಶಸ್ತಿ ಪಡೆದ ಯಕ್ಷಗಾನ ಕಲಾವಿದ ಶ್ರೀ ಮಾಧವ ಪಾಟಾಳಿ, ವಿದುಷಿ ಶಕುಂತಲಾ ಕೃಷ್ಣ ಭಟ್, ಚಾರ್ಲಿ ಸಿನಿಮಾ ಖ್ಯಾತಿಯ ನಿರ್ದೇಶಕ ಶ್ರೀ ಕಿರಣ್‌ರಾಜ್, ಯುವ ಕ್ರೀಡಾಸಾಧಕಿ ದೀಕ್ಷಾ ಮುಂತಾದವರು ಉಪಸ್ಥಿತರಿದ್ದರು.

ಸುಮಾರು 43 ವರ್ಷಗಳಿಂದ ಮಂಗಳೂರು ಆಕಾಶವಾಣಿಯಲ್ಲಿ ಚಿಂತನ, ಭಾಷಣಾದಿ ವಿವಿಧ ಕಾರ್ಯಕ್ರಮಗಳನ್ನು ನೀಡುತ್ತಾ ಬಂದಿರುವ ಶ್ರೀ ರಾಂ ಎಲ್ಲಂಗಳ ಅವರಿಗೆ ಈಗಾಗಲೇ 'ಧರ್ಮಸ್ಥಳ ರತ್ನವರ್ಮ ಹೆಗ್ಗಡೆ ಪ್ರಶಸ್ತಿ', 'ಬಿ.ಎಂ.ಶ್ರೀ ದತ್ತಿ ಪುರಸ್ಕಾರ', ಕರ್ನಾಟಕ ಬಾಲವಿಕಾಸ ಅಕಾಡೆಮಿಯ 'ಮಕ್ಕಳ ಚಂದಿರ ಪ್ರಶಸ್ತಿ', ಗಡಿನಾಡ ಧ್ವನಿ 'ಕಲಾಭೂಷಣ ರಾಜ್ಯ ಪ್ರಶಸ್ತಿ', ಕಾಸರಗೋಡು ಜಿಲ್ಲಾ 'ಚುಟುಕು ಸಾಹಿತ್ಯ ಪ್ರಶಸ್ತಿ' ಮತ್ತು 'ಕಲಾ ಪ್ರತಿಭಾ ಪ್ರಶಸ್ತಿ' ಲಭಿಸಿರುತ್ತದೆ.

## ಉಪನಯನ

- ಶ್ರೀ ರವಿಕಿರಣ್ ಮತ್ತು ಶ್ರೀಮತಿ ಸೌಮ್ಯ ಇವರ ಪುತ್ರ **ಚಿ| ದಯಾಯು** ಇವನ ಉಪನಯನ ತಾ. 19–05–2025ನೇ ಸೋಮವಾರ ಮಂಗಳೂರಿನ 'ಪತ್ತುಮುಡಿ ಸೌಧ'ದಲ್ಲಿ ನಡೆಯಿತು.
- ಶ್ರೀ ಚಂದ್ರಕಾಂತ್ ಮತ್ತು ಶ್ರೀಮತಿ ದೀಪಿಕಾ ಇವರ ಪುತ್ರ **ಚಿ| ಸ್ಕಂದ** ಇವನ ಉಪನಯನ ತಾ. 21–05–2025ನೇ ಬುಧವಾರ ಉಡುಪಿಯ 'ಶ್ರೀ ಶಾರದಾ ಮಂಟಪ'ದಲ್ಲಿ ನಡೆಯಿತು.
- ಶ್ರೀ ಸುರೇಶ್ ಮತ್ತು ಶ್ರೀಮತಿ ದೀಪಾ ಇವರ ಪುತ್ರ **ಚಿ| ನಿಖಿಲ್**ನ ಉಪನಯನ ತಾ. 8–6–2025ನೇ ರವಿವಾರ ಬೆಂಗಳೂರಿನ 'ಶ್ರೀ ಜ್ಞಾನಶಕ್ತಿ ಮಂಟಪ'ದಲ್ಲಿ ನಡೆಯಿತು.
- ಶ್ರೀ ವಾಸುದೇವ ಶಾನುಭೋಗ ಮತ್ತು ಶ್ರೀಮತಿ ಕನಕಲಕ್ಷ್ಮೀ ಇವರ ಪುತ್ರ **ಚಿ| ಭಾರ್ಗವ ಶಾನುಭೋಗ** ಇವನ ಉಪನಯನ ತಾ. 5–6–2025ನೇ ಗುರುವಾರ ಹೊರನಾಡಿನ 'ಗುಡ್ಡೆಕೊಪ್ಪ ಶಾರದಾ ನಿಲಯ'ದಲ್ಲಿ ನಡೆಯಿತು.
- ಬೆಳ್ತಂಗಡಿಯ ಕರಂದಾಡಿ ಶ್ರೀ ರಜತ್ ರಾವ್ ಮತ್ತು ಶ್ರೀಮತಿ ಕರುಣಾ ರಾವ್ ಇವರ ಪುತ್ರ **ಚಿ| ವಿಹಾಗ್** ಇವನ ಉಪನಯನವು ಬೆಳ್ತಂಗಡಿ ಲಾಯಿಲ 'ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಸಭಾಭವನ'ದಲ್ಲಿ ತಾ. 30–05–2025, ಶುಕ್ರವಾರ ನೆರವೇರಿತು.
- ಶ್ರೀ ವಾಟೆ ಹರಿಪ್ರಸಾದ್ ರಾವ್ ಮತ್ತು ಶ್ರೀಮತಿ ದೀಪಶ್ರೀ ಇವರ ಪುತ್ರ **ಚಿ| ರಕ್ಷಿತ** ಇವನ ಉಪನಯನ ತಾ. 5–6–2025ನೇ ಗುರುವಾರ ಶೃಂಗೇರಿಯಲ್ಲಿ ನಡೆಯಿತು.
- ಶ್ರೀ ಯಶೋಧರ ಶಿರ್ಥಾಡಿ ಮತ್ತು ಶ್ರೀಮತಿ ಸೌಮ್ಯ ಇವರ ಪುತ್ರ **ಚಿ| ಸ್ಕಂದ** ಇವನ ಉಪನಯನ ತಾ. 30–5–2025ನೇ ಶುಕ್ರವಾರ ಯಲಹಂಕ 'ಶ್ರೀ ವಿನಾಯಕ ಹಾಲ್'ನಲ್ಲಿ ನಡೆಯಿತು.
- ಶ್ರೀ ಅಕ್ಷಯ ಹೆಬ್ಬಾರ್ ಮತ್ತು ಶ್ರೀಮತಿ ಸುಧಾ ಇವರ ಪುತ್ರ **ಚಿ| ಸಮರ್ಥ** ಇವನ ಉಪನಯನವು ತಾ. 30–5–2025ನೇ ಶುಕ್ರವಾರ ಬೆಂಗಳೂರಿನ 'ಜ್ಞಾನಶಕ್ತಿ ಮಂಟಪ'ದಲ್ಲಿ ನಡೆಯಿತು.
- ಶ್ರೀ ಶ್ರೀನಾಥ್ ರಾವ್ ಮತ್ತು ಶ್ರೀಮತಿ ಅಕ್ಷತಾ ಇವರ ಪುತ್ರ **ಚಿ| ಅವನೀಶನ** ಉಪನಯನ ತಾ. 19–5–2025ನೇ ಸೋಮವಾರ ಉಡುಪಿಯ 'ಶಾರದಾ ಮಂಟಪ'ದಲ್ಲಿ ನಡೆಯಿತು.
- ಶ್ರೀ ಐ. ಕೆ. ಗಿರೀಶ್ ರಾವ್ ಮತ್ತು ಶ್ರೀಮತಿ ಹೇಮಶ್ರೀ ಇವರ ಪುತ್ರ **ಚಿ| ವಿಶ್ರುತನ** ಉಪನಯನ ತಾ. 19–5–2025ನೇ ಸೋಮವಾರ ಬೆಂಗಳೂರಿನ 'ಗಣೇಶ್ ಹಾಲ್' 'ಶ್ರೀ ಸತ್ಯಗಣಪತಿ ಶಿರಡಿ ಸಾಯಿಬಾಬಾ ದೇವಸ್ಥಾನ'ದಲ್ಲಿ ನಡೆಯಿತು.

# ಅಪಾರಕೀರ್ತಿ ಗಳಿಸಿ




ದುರ್ಗ ಗ್ರಾಮ ತೆಳ್ಳಾರು ಕಲ್ಲೋಟ್ಟು ಶಂಕರ ನಿವಾಸದ ಶ್ರೀ ಕೆ. ರಾಘವೇಂದ್ರ ರಾವ್ ಮತ್ತು ಶ್ರೀಮತಿ ಶ್ಯಾಮಿಲಿ ರಾವ್ ದಂಪತಿಗಳ ಪುತ್ರಿ **ಕುಮಾರಿ ಅಕ್ಷರ ರಾವ್** ಇವಳು ಶ್ರೀ ಬಿ. ಮಂಜುನಾಥ ಪೈ ಸ್ಮಾರಕ ಸರಕಾರಿ ಪ್ರೌಢಶಾಲೆ, ತೆಳ್ಳಾರು ಇಲ್ಲಿಯ ವಿದ್ಯಾರ್ಥಿನಿ. ಈ ಬಾರಿ ನಡೆದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 625ರಲ್ಲಿ 560 ಅಂಕಗಳಿಸಿ ಉತ್ತೀರ್ಣಳಾಗಿರುತ್ತಾಳೆ. ಅಲ್ಲದೆ ಕನ್ನಡದಲ್ಲಿ 125ಕ್ಕೆ 125 ಅಂಕ ಗಳಿಸಿರುತ್ತಾಳೆ.

— — —



**ಚಿ। ಪೃಥ್ವಿ** ಈ ಬಾರಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 586/625 (93.7%) ಅಂಕಗಳನ್ನು ಪಡೆದಿದ್ದಾನೆ. ಇವನು ಮಂಗಳೂರಿನ ಶ್ರೀ ಶ್ಯಾಮ್‌ಪ್ರಸಾದ್ ಮತ್ತು ಶ್ರೀಮತಿ ಸುಧಾರಾಣಿ ಇವರ ಪುತ್ರ. ಇವನು ಕೆನರಾ ಹೈಸ್ಕೂಲ್, ಡೊಂಗರಕೇರಿ ಶಾಲೆಯ ವಿದ್ಯಾರ್ಥಿ.




- ❖ ಶ್ರೀ ಜೆ. ಜಗದೀಶನ್ ಮತ್ತು ಶ್ರೀಮತಿ ಜೆ. ಮಾಲಿನಿ ಇವರ ಪುತ್ರಿ **ಚಿ। ಸೌ। ರೇಷ್ಮ** ಮತ್ತು **ಚಿ। ಎಸ್. ನಿಶಾಂತ** ಇವರ ವಿವಾಹವು ತಾ. 28–5–2025ನೇ ಬುಧವಾರ ತಂಜಾವೂರಿನ 'ಸಂಗೀತಂ ಪ್ಯಾಲೆಸ್'ನಲ್ಲಿ ನಡೆಯಿತು.
- ❖ ಪಾದೆಬೆಟ್ಟು ಶ್ರೀ ರಾಮಚಂದ್ರ ರಾವ್ ಮತ್ತು ಶ್ರೀಮತಿ ಅನುರಾಧಾ ಇವರ ಪುತ್ರಿ **ಚಿ। ಸೌ। ರಚಿತ** ಹಾಗೂ ಶ್ರೀ ದಿಲೀಪ್ ಕನ್‌ಬರ್ಗೀ ಮತ್ತು ಶ್ರೀಮತಿ ಪುಷ್ಪಾ ಇವರ ಪುತ್ರ **ಚಿ। ದರ್ಶನ್** ಇವರ ವಿವಾಹವು ತಾ. 5–6–2025ನೇ ಗುರುವಾರ ಉಡುಪಿಯ 'ಶಾರದಾ ಮಂಟಪ'ದಲ್ಲಿ ನಡೆಯಿತು.
- ❖ ಪಡುಬಿದ್ರಿ ಶ್ರೀ ಅನಂತರಾಮ ಶಾಸ್ತ್ರಿ ಮತ್ತು ಶ್ರೀಮತಿ ವೀಣಾ ಇವರ ಪುತ್ರ **ಚಿ। ಅರ್ಜುನ್ ಶಾಸ್ತ್ರಿ** ಹಾಗೂ ಶ್ರೀ ಎಂ. ವಿ. ಜಯರಾಂ ಮತ್ತು ಶ್ರೀಮತಿ ಶ್ರೀಮತಿ ಇವರ ಪುತ್ರಿ **ಚಿ। ಸೌ। ವರ್ಷ ಜಯರಾಂ** ಇವರ ವಿವಾಹವು ತಾ. 4–6–2025ನೇ ಬುಧವಾರ ಶಿವಮೊಗ್ಗ 'ಗಾಯತ್ರಿ ಮಾಂಗಲ್ಯ ಮಂದಿರ'ದಲ್ಲಿ ನಡೆಯಿತು.
- ❖ ಮೈಸೂರು ದಿ। ಪ್ರಸನ್ನ ಕುಮಾರ್ ಮತ್ತು ಶ್ರೀಮತಿ ಹರಿಣಾ ಇವರ ಪುತ್ರಿ **ಚಿ। ಸೌ। ಸಹಸ್ರ** ಹಾಗೂ ನೀಲಂಗಳ ಶ್ರೀ ರಾಮಕೃಷ್ಣ ಮತ್ತು ಶ್ರೀಮತಿ ಸುಧಾ ಇವರ ಪುತ್ರ **ಚಿ। ಅಜಿತ್ ಆರ್**. ಇವರ ವಿವಾಹವು ತಾ. 2–6–2025ನೇ ಸೋಮವಾರ ಮಂಗಳೂರಿನ 'ಶ್ರೀ ಸುಬ್ರಹ್ಮಣ್ಯ ಸಭಾಭವನ'ದಲ್ಲಿ ನಡೆಯಿತು.
- ❖ ಕಳಿಂಜ ಕಾಯದ ಶ್ರೀ ಅಶೋಕ್ ಭಟ್ ಮತ್ತು ಶ್ರೀಮತಿ ವಾಣಿ ಇವರ ಪುತ್ರಿ **ಚಿ। ಸೌ। ಅಶ್ವಿನಿ** ಹಾಗೂ ಉಬರಳೆ ಶ್ರೀ ನಾರಾಯಣ ಮತ್ತು ಶ್ರೀಮತಿ ಜಯಶ್ರೀ ಇವರ ಪುತ್ರ **ಚಿ। ಜಯರಾಂ** ಇವರ ವಿವಾಹವು ತಾ. 19–5–2025ನೇ ಸೋಮವಾರ ಬೆಳ್ತಂಗಡಿ 'ಶ್ರೀ ಸುಬ್ರಹ್ಮಣ್ಯ ಸಭಾಭವನ'ದಲ್ಲಿ ನಡೆಯಿತು.

Phone : 0824 - 2440110, 2213946

**VISHRAM MOTORS (P.) LTD.**

No. 4, Kodialbail Church Building

K. S. Rao Road, MANGALORE - 575 003

*Authorised Dealers for :*

Vijai Super GP 150 &

Vikram 3 Wheelers (Petrol & Diesel)



ಪತ್ರಿಕೆಗೆ ಶುಭ ಬಯಸುವ–

**ಶ್ರೀ ಕಾಂತಾವರ ಜಯಪ್ರಕಾಶ್**

**ಮತ್ತು ಶ್ರೀಲತಾ ಹಾಗೂ**

**ತನ್ವಿ, ನಿವೇದ, ದೃತಿ ಮತ್ತು ದ್ರುವ್**



NAVADURGA FINANCIALS

Estd 1998

SCAN ME TO KNOW MORE!!!

## ಜಗದ್ಗುರು ಶಂಕರರ ತತ್ವಗಳು ನಮ್ಮ ಜೀವನಕ್ಕೆ ದಾರಿದೀಪ

### ಶ್ರೀಮತಿ ಸವಿತಾ ಎರ್ಮಾಳ್



ಶ್ರೀ ಜ್ಞಾನಶಕ್ತಿ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಬ್ರಹ್ಮಾವರ ತಾಲೂಕು ಇದರ ವತಿಯಿಂದ ಶಂಕರ ಜಯಂತಿ ಆಚರಣೆ ನಡೆಯಿತು. ಸಂಘದ ಅಧ್ಯಕ್ಷರಾದ ಶ್ರೀ ಶಂಭುಶಂಕರ ರಾವ್ ಜ್ಯೋತಿ ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಆದಿಗುರು ಶಂಕರಾಚಾರ್ಯರ ತತ್ವ ಆದರ್ಶಗಳು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು ಎಷ್ಟು ಮುಖ್ಯ ಎಂಬ ಬಗ್ಗೆ ವಿಶೇಷ ಮಾಹಿತಿಯನ್ನು ಕಾರ್ಯದರ್ಶಿಯಾದ ಶ್ರೀಮತಿ ಸವಿತಾ ಎರ್ಮಾಳ್ ನೀಡಿದರು. ಎಲ್ಲರೂ ಶಂಕರಾಚಾರ್ಯರ ಛಾಯಾಚಿತ್ರಕ್ಕೆ ಪುಷ್ಪಾರ್ಚನೆಗೈದರು. ಈ ಸಂದರ್ಭದಲ್ಲಿ ಬ್ರಾಹ್ಮಣ ಮಹಾಸಭಾ, ಬ್ರಹ್ಮಾವರ ವಲಯದ ಅಧ್ಯಕ್ಷರಾದ ಡಾ. ವೈ. ರವೀಂದ್ರನಾಥ ರಾವ್, ಸಂಘದ ಸಂಚಾಲಕರಾದ ಶ್ರೀ ಉದಯ ಬಿ., ಕೋಶಾಧಿಕಾರಿಯಾದ ಶ್ರೀ ನೀಲಕಂಠ ರಾವ್, ಜತೆ ಕಾರ್ಯದರ್ಶಿಯಾದ ಶ್ರೀ ರವೀಂದ್ರ ರಾವ್, ಯುವ ವೇದಿಕೆಯ ಅಧ್ಯಕ್ಷರಾದ ಶ್ರೀ ರಾಮಚಂದ್ರ ರಾವ್, ಶ್ರೀ ಶ್ಯಾಮಣ್ಣ ಬ್ರಹ್ಮಾವರ, ಗೌರಿ ಸೋಮೇಶ ರಾವ್, ಶ್ರೀ ರಾಮಚಂದ್ರ ರಾವ್, ಮಸ್ಕಿಬೈಲ್ ಮುಂತಾದವರು ಉಪಸ್ಥಿತರಿದ್ದರು.

ಪತ್ರಿಕೆಗೆ ಶುಭ ಬಯಸುವ–

**ಶ್ರೀ ಸೋಮಶೇಖರನ್**

ಮತ್ತು

**ಶ್ರೀಮತಿ ಅರುಣಾ ಸೋಮಶೇಖರನ್**

**ಚಿಲಿಂಬಿ, ಮಂಗಳೂರು**



**PRAVEEN KUMAR ADYAPADY**

NOTARY & ADVOCATE

MANGALORE OFFICE
JANVI PLAZA, IInd FLOOR
BUNTS HOSTEL, MANGALORE

BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE

0824 - 2254478 (O) 9620392584, 9448724981(M), 2254448 (R)

We undertakes : Civil, Criminal, Motor Vehicles, A.C., D.C. Cases, Land Conversion, Registration etc.

Prop: Somashekhar
Mob: 9844551244

**WONDER CREATION**

Decor & Event planners

Our Services :-
- Corporate Events
- All Types Of Stage Decoration
- Sounds And Lights
- Led Wall Rentals
- Selfie Booth Concept
- Shamiyana/Tint Sheet/Plat Form Chairs/Round Table etc....
- Photography & Videography

2T-145-3A, Kulai Gudde Road, Kulai, Surathkal

ಪತ್ರಿಕೆಗೆ ಶುಭ ಬಯಸುವ–

**ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು**

**ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ**

**ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ**



*Sri Hari Adyapady*
*Proprietor*

Ph : 0824-2251597 (R)
2252119 (O)
Mobile : 9448344612
9964072489

**SHIVA ELECTRICALS**

2nd Floor, Ozanam Complex, Church Building
Main Road, BAJPE, MANGALORE

*We undertake all types of Electrical, Plumbing and Sanitary works*





# ನಮ್ಮ ಸುಬ್ರಹ್ಮಣ್ಯ ಸಭಾದ ಪ್ರವಾಸದ ಸುಮಧುರ ನೆನಪುಗಳು



ಶ್ರೀ ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್ ಅವರು ಅಧ್ಯಕ್ಷ ಡಾ. ಎ. ಪಿ. ಕೃಷ್ಣ ಇವರೊಂದಿಗೆ ಈ ಬಾರಿಯ ಪ್ರವಾಸ ಕೇರಳದ ತಿರುವನಂತಪುರಕ್ಕೆ ಹೋಗುವ ಎಂದು ಪ್ರಸ್ತಾಪ ಮಾಡಿದ್ದರು. ಅವರು ತಿರುವನಂತಪುರ ಡೆಂಟಲ್ ಕಾಲೇಜೊಂದರಲ್ಲಿ ಪ್ರೊಫೆಸರ್ ಹಾಗೂ Head of dept. ಆಗಿದ್ದು ಪ್ರತಿ ತಿಂಗಳು ಮೂರು ದಿನದ ಮಟ್ಟಿಗೆ ಮಂಗಳೂರಿನಿಂದ ಹೋಗಿ ಬರುತ್ತಿರುತ್ತಾರೆ. ಕೆಲಸದ ಒತ್ತಡದಿಂದ, ಮತ್ತಿತರ ಜವಾಬ್ದಾರಿಯ ಒತ್ತಡದಿಂದ ಅವರ ಪತ್ನಿ ಶ್ರೀಮತಿ ಸುಮನ್ ಕೃಷ್ಣ (ನನಗೆ) ಈ ಜವಾಬ್ದಾರಿಯನ್ನು ವಹಿಸಿಕೊಟ್ಟರು. ಅವರೊಂದಿಗೆ ಹಲವು ಬಾರಿ ಹೋಗಿ ಬಂದು ಊರಿನ ಪರಿಚಯ ಇದ್ದುದರಿಂದ ನಾನು ಈ ಟಾಸ್ಕ್ ಒಪ್ಪಿಕೊಂಡೆ. ಇದು ನನ್ನೊಬ್ಬಳಿಂದ ಆಗಬಹುದೇ ಎಂಬ ಅಂಜಿಕೆ ಇತ್ತು. ಇಲ್ಲಿಂದ ಪ್ರವಾಸದ ಕೆಲಸ ಪ್ರಾರಂಭ. ಮೊದಲಿಗೆ ಎಷ್ಟು ಜನ ಬರುತ್ತಾರೆ ಅನ್ನೋ ಮಾಹಿತಿ ಬೇಕಾಗಿತ್ತು. ಅದಕ್ಕಾಗಿ ಒಂದು ವಿಜ್ಞಾಪನೆ – ಪ್ರವಾಸಕ್ಕೆ ಬರುವವರು ಸುಮಂಗಲಾ ಅವರಲ್ಲಿ ಹೆಸರು ಕೊಡುವಂತೆ ಭಿನ್ನವಿಸಲಾಯಿತು– ಒಂದೆರಡು ದಿನಗಳಲ್ಲೇ ಹೆಸರುಗಳು ಪ್ರವಾಹದಂತೆ ಬರತೊಡಗಿದವು. ದೂರದೂರಿಗೆ ಮೊದಲ ಸಲ ನಮ್ಮ ಪ್ರವಾಸವಾದುದರಿಂದ ಸಂಖ್ಯೆ 40 ತಲುಪಿದಾಗ ಕೆಲವೊಂದು ಕಾರಣಗಳಿಂದಾಗಿ ಮೊಟಕುಗೊಳಿಸಲಾಯಿತು. ತಿರುವನಂತಪುರ ಮತ್ತು ಕನ್ಯಾಕುಮಾರಿಗೆ ಎರಡು ದಿನದ ಪ್ರವಾಸ ನಿಗದಿಯಾಯಿತು. ಮೊದಲಿಗೆ ರೈಲಲ್ಲಿ ಟಿಕೆಟು ಕಾದಿರಿಸಲಾಯಿತು. 40 ಮಂದಿ ಇದ್ದು ಅವರಿಗೆಲ್ಲ ಸುತ್ತಾಡಲು ಬಸ್ಸು, ಉಳಕೊಳ್ಳುವ ವ್ಯವಸ್ಥೆ ಹಾಗೂ ಉತ್ತಮ ಶುಚಿ ತರಕಾರಿ ಆಹಾರದ ವ್ಯವಸ್ಥೆ ಬಗ್ಗೆ ವಿಚಾರಿಸಲು ಪ್ರಾರಂಭಿಸಿದೆ. ಈ ಬಗ್ಗೆ ವಿಚಾರಿಸಿ ಉಳಕೊಳ್ಳಲು ರೂಮಿಗಾಗಿ ಖುದ್ದಾಗಿ ಭೇಟಿ ನೀಡಿ ಸಣ್ಣ ಪಟ್ಟಿಯೊಂದು ಮಾಡಿಕೊಂಡು ಒಂದು ತೀರ್ಮಾನಕ್ಕೆ ಬರಲು ನಮ್ಮವರನ್ನು ಕೇಳಿದಾಗ ನಮ್ಮಲ್ಲಿ ಯಾರಿಗೂ ಆರ್ಥಿಕ ತೊಂದರೆ ಇಲ್ಲ ಎಂದೂ ಉತ್ತಮ A/C ಸೌಲಭ್ಯಗಳನ್ನು ಹುಡುಕುವ ಸಲಹೆ ಬಂತು. ಅಂತೂ ಇಂತೂ ಹೇಗೋ ನನಗೆ ತಿಳಿದ ಮಟ್ಟಿಗೆ ಯೋಚನೆ ಮಾಡಿ ಒಂದು ಪ್ರವಾಸದ ನಕ್ಷೆ ಮಾಡಿಕೊಂಡೆ. ಎಲ್ಲಿ ಎಲ್ಲರಿಗೂ ಅನಾನುಕೂಲವಾಗುತ್ತದೋ ಎಂಬ ಭಯ ನನ್ನನ್ನು ಕಾಡುತ್ತಿತ್ತು. ನನ್ನ ಈ ಅಳಲನ್ನು ನಮ್ಮ ಸುಬ್ರಹ್ಮಣ್ಯ ಸಭಾದ ಬೆನ್ನೆಲುಬಿನಂತಿರುವ ಶ್ರೀ ಕರುಣ್ ರಾವ್ ಬೆಳ್ಳೆಯವರೊಂದಿಗೆ ಹೇಳಿಕೊಂಡಾಗ 'ನಾವೆಲ್ಲರೂ ಒಂದೇ ಕುಟುಂಬದ ಮಂದಿಯಂತಲ್ಲವೇ... ಹೊಂದಾಣಿಕೆ ಮಾಡಿಕೊಳ್ಳೋಣ ಚಿಂತೆ ಬೇಡ' ಎಂದು ಹುರಿದುಂಬಿಸಿದರು. ಈಗ ಪ್ರವಾಸದ ದಿನ ಕ್ಷಣಗಣನೆ ಪ್ರಾರಂಭವಾಯಿತು. ಮೇ ತಿಂಗಳ 6ನೇ ತಾರೀಕಿನಂದು ಸಾಯಂಕಾಲ 5 ಗಂಟೆಗೆ ಮಂಗಳೂರು ರೈಲು ನಿಲ್ದಾಣದಲ್ಲಿ ಸೇರಿದೆವು. ಎಲ್ಲರ ಮುಖದಲ್ಲೂ ಹುರುಪು, ಉತ್ಸಾಹ ಎದ್ದುಕಾಣುತಿತ್ತು. ಸಮಯಕ್ಕೆ ಸರಿಯಾಗಿ ಮಾವೇಲಿ ರೈಲು ಹೊರಟಿತು. ಚಕ್ಕುಲಿ, ಚಿಪ್ಸ್, ಕಾಜುಕಟ್ಲಿ, ಕೋಡುಬಳೆ, ಉಂಡೆ ಹೀಗೆ ಸಿಹಿತಿಂಡಿಗಳ ಮೆರವಣಿಗೆ ಶುರುವಾಯಿತು. ಬಾಳೆಹಣ್ಣು, ಹಲಸು, ಮಾವು, ನೆಲ್ಲಿಕಾಯಿ ಇತ್ಯಾದಿ ಹಣ್ಣು–ಹಂಪಲುಗಳನ್ನು ಸವಿಯುತ್ತಾ ಜೊತೆಗೆ ಸಾಗಿದೆವು. ಪ್ರವಾಸಿಗರ ಕುಶಲೋಪಚಾರದ ಮಾತುಗಳ ಕಲರವದಲ್ಲಿ ರೈಲಿನ ಧ್ವನಿ ಕೇಳದಾಯಿತು. ರಾತ್ರಿ ಟ್ರೈನಲ್ಲಿ ಚಪಾತಿ, ಸಾಗು ಹಾಗೂ ಮೊಸರನ್ನದ ಭರ್ಜರಿ ಊಟ. ಊಟದ ಬಳಿಕ ಆಟ, ಹರಟೆ... ಆಮೇಲೆ ಗಾಢ ನಿದ್ದೆ. ರೈಲು ನಿಗದಿತ ಸಮಯಕ್ಕೆ ಮೊದಲೇ ತಲುಪಿತು. ಉತ್ಸಾಹದಿಂದ ಲಗೇಜ್ ಎಳಕೊಂಡು ಹೊರಬರುವಷ್ಟರಲ್ಲಿ ಅಲ್ಲಿ ಬಂದು ನಮ್ಮನ್ನು ಒಯ್ಯಲು ಸಿದ್ಧವಾಗಿದ್ದ ಹವಾನಿಯಂತ್ರಿತ ಬಸ್ಸು 10 ನಿಮಿಷದಲ್ಲಿ ನಮ್ಮನ್ನು ಸುಸಜ್ಜಿತ ವಸತಿ ಸಮುಚ್ಚಯಕ್ಕೆ ತಲುಪಿಸಿತು. ಬೇಗಬೇಗನೇ ಎಲ್ಲಾ ಸ್ನಾನ ಶೌಚಾದಿಗಳನ್ನು ಮುಗಿಸಿ, ರುಚಿಯಾದ ತಿಂಡಿ, ಚಾ ಸೇವಿಸಿ, ಅದೇ ಬಸ್ಸಿನಲ್ಲಿ ಕನ್ಯಾಕುಮಾರಿಗೆ ಪ್ರಯಾಣ ಮುಂದುವರಿಸಿದೆವು. ಮತ್ತೆ ತಿಂಡಿ ತಿನಸುಗಳೊಂದಿಗೆ ದಾರಿಯುದ್ದಕ್ಕೂ ಹಾಡುತ್ತಾ ನಲಿಯುತ್ತಾ ಸಾಗಿದೆವು. ದಾರಿ ಮಧ್ಯೆ ಚಾ, ಕಾಫಿ ಸೇವನೆ. ಮಟ ಮಟ ಮಧ್ಯಾಹ್ನ ಕನ್ಯಾಕುಮಾರಿ ತಲುಪಿದೆವು. ಬೇಗನೆ ದೇವಿಯ ದರ್ಶನಕ್ಕೆ ಧಾವಿಸಿದೆವು. ನಮ್ಮ ಸೌಭಾಗ್ಯವೋ ಏನೋ ಅದೇ ಸಮಯಕ್ಕೆ ಮಂಗಳಾರತಿಯ ದಿವ್ಯದರ್ಶನ ನಮಗೆ. ಧನ್ಯತಾಭಾವದಿಂದ ಹೊರಬಂದು ಅಲ್ಲಿನ ಮಾರುತಿ ಹೋಟೆಲಲ್ಲಿ ಮೊದಲಾಗಿ ಆರ್ಡರ್ ಕೊಟ್ಟು 40 ಜನಕ್ಕಾಗಿ ಎಲ್ಲ ಸೀಟುಗಳನ್ನು ಬುಕ್ ಮಾಡಿ ವ್ಯವಸ್ಥೆ ಮಾಡಿದ್ದರಿಂದ ನಮಗೆಲ್ಲರಿಗೂ ಒಟ್ಟಿಗೆ ಭರ್ಜರಿ ಊಟ ಕಾದಿರಿಸಲಾಗಿತ್ತು...

*(ಮುಂದಿನ ಸಂಚಿಕೆಗೆ)*

***– ಶ್ರೀಮತಿ ಸುಮನ್ ಕೃಷ್ಣ***

## ಪುತ್ತೂರಿನ 'ಶಿವಸದನ'ದಲ್ಲಿ ಶ್ರೀ ವಿಶಾಲ್ ರಾವ್ ಮತ್ತು ಶ್ರೀಮತಿ ಮಾನಸ ದಂಪತಿಗಳ ಪುತ್ರ ಚಿ। ಆಂಶ್‌ನ ಹುಟ್ಟುಹಬ್ಬ ಸಂಭ್ರಮಾಚರಣೆ




ಬೆಂಗಳೂರಿನಲ್ಲಿರುವ ಶ್ರೀ ವಿಶಾಲ್ ರಾವ್ ಮತ್ತು ಶ್ರೀಮತಿ ಮಾನಸ ತಮ್ಮ ಪುತ್ರ ಚಿ। ಆಂಶ್‌ನ ಹುಟ್ಟುಹಬ್ಬ ಸಂಭ್ರಮದ ಸಂದರ್ಭದಲ್ಲಿ 'ಶಿವಸದನ' ನಿವಾಸಿಗಳಿಗೆ ತಾರೀಕು 1–6–2025ನೇ ಆದಿತ್ಯವಾರ ವಿಶೇಷ ಭೋಜನ ಪ್ರಾಯೋಜಿಸಿರುತ್ತಾರೆ. ಮಗುವಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳನ್ನು ಹಿರಿಯರ ಹಾಗೂ ವಿಶೇಷ ಚೇತನರ ಹಾಗೂ ಆಡಳಿತ ಮಂಡಳಿಯ ಪರವಾಗಿ ಅರ್ಪಿಸುತ್ತೇವೆ. ಆ ದಿನ ಒಬ್ಬ ಉದಯೋನ್ಮುಖ ಪ್ರತಿಭೆ, ಭಜನಾ ಗುರುಗಳಾದ ಪೊಳಲಿ ಶ್ರೀ ಸುಬ್ಬರಾವ್ ಇವರ ಸಂಚಾಲಕತ್ವದ ಶಿವರಂಜನಿ ಕಲಾಕೇಂದ್ರ ಪೊಳಲಿ / ಬೊಕ್ಕಸದ ಸದಸ್ಯೆ ಶ್ರೀಮತಿ ಶ್ಯಾಮಲಾ ಸುರೇಶ್ ಇವರ ಮಗಳು ಕುಮಾರಿ ದೇವಿಕಾ ಇವರಿಂದ ಪುತ್ತೂರು ಶಿವಸದನದಲ್ಲಿ ತಾರೀಕು 1–06–2025ನೇ ಆದಿತ್ಯವಾರ ಬೆಳಗ್ಗೆ 11:00 ಗಂಟೆಯಿಂದ 'ಕಾಳಿಂಗಮರ್ದನ' ಹರಿಕಥೆ ಕಾರ್ಯಕ್ರಮ ನಡೆಯಿತು. ಇವಳು ಕಲಾರತ್ನ ಶ್ರೀ ಶಂ. ನಾ. ಅಡಿಗ ಕುಂಬ್ಳೆ ಇವರ ಶಿಷ್ಯೆ. ಇವಳು ಹಾಡು, ನೃತ್ಯ ಮತ್ತು ವಯೋಲಿನ್ ನುಡಿಸಿದ್ದು, ಹಾರ್ಮೋನಿಯಂನ್ನೂ ಸ್ವತಃ ತಾಯಿ ಶ್ರೀಮತಿ ಶ್ಯಾಮಲಾ ಸುರೇಶ್ ಹಾಗೂ ತಬಲಾದಲ್ಲಿ ಬೊಕ್ಕಸದ ವಿದ್ಯಾರ್ಥಿ ಚಿ। ಲಕ್ಷ್ಮೀಶ ಸಹಕರಿಸಿದರು. ಎಲ್ಲಾ ಹಿರಿಯ ನಾಗರಿಕರು, ಪುತ್ತೂರಿನ ಬಂಧುಗಳು, ಸಿಬ್ಬಂದಿ ವರ್ಗ, ಟ್ರಸ್ಟ್‌ನ ಸದಸ್ಯರು, ಎಲ್ಲರನ್ನು ಈ ಯುವಪ್ರತಿಭೆಗಳು ಭಾವನಾಲೋಕದಲ್ಲಿ ವಿಹರಿಸಿ, ಸಂತೋಷದ ಕಡಲಲ್ಲಿ ತೇಲಿಸಿದರು. ಎಲ್ಲಾ ಕಾರ್ಯಕ್ರಮದ ಬಳಿಕ ಎಲ್ಲರೂ ವಿಶೇಷ ಭೋಜನ ಪರಸ್ಪರ ಬಡಿಸುವಲ್ಲಿ ಸಹಕರಿಸಿದರು. ಶಿವರಂಜಿನಿ ಕಲಾಕೇಂದ್ರದ ನೇತೃತ್ವ ವಹಿಸಿದ ಶ್ರೀಮತಿ ಶಾರದ ರಾವ್ ಮತ್ತು ಅಲ್ಲಿನ ಸದಸ್ಯರು ಆಗಮಿಸಿದ್ದರು. ಶಿವಸದನ ಟ್ರಸ್ಟ್‌ನ ಅಧ್ಯಕ್ಷೆ ಶ್ರೀಮತಿ ಸುಮಂಗಲ ಪ್ರಭಾಕರ್ ಸ್ವಾಗತಿಸಿದರೆ, ಕಾರ್ಯದರ್ಶಿ ಶ್ರೀ ಕರುಣ್ ಬೆಳ್ಳೆ, ಶ್ರೀಮತಿ ರತ್ನ ರಾಜೇಂದ್ರ, ಪುಷ್ಪ ನೀಡಿ ಯುವ ಪ್ರತಿಭೆಗಳನ್ನು ಸ್ವಾಗತಿಸಿದರು. ಶ್ರೀಮತಿ ಶಕುಂತಲಾ ರಾವ್ ಪರಿಚಯಿಸಿದರೆ, ಶ್ರೀಮತಿ ಗಾಯತ್ರಿ ಪಿಲಿಂಜ ಧನ್ಯವಾದ ಸಮರ್ಪಿಸಿದರು. ಕುಮಾರಿ ಡಾ। ಗಾನಾ ಫೋಟೋಗ್ರಫಿಯಲ್ಲಿ ಸಹಕರಿಸಿದರು.

# ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ಪ್ರತಿಷ್ಠಿತ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ಸಹಾಯಹಸ್ತ



ಮಂಗಳೂರಿನ ಕುಳೂರು ನಿವಾಸಿ ಶ್ರೀ ಶ್ರೀನಿವಾಸ ರಾವ್ ಹಾಗೂ ಶ್ರೀಮತಿ ಪುಷ್ಪಾವತಿ ದಂಪತಿಗಳು ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ'ಕ್ಕೆ ರೂ. **25,000/-** ದೇಣಿಗೆ ನೀಡಿದ್ದಾರೆ. ಈ ಹಿಂದೆ ಅವರು ರೂ. **2,25,000/-** ನೀಡಿದ್ದು, ಒಟ್ಟು ರೂ. **2,50,000/-** ದೇಣಿಗೆ ನೀಡಿದಂತಾಗಿದೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.



Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

*Publisher :* *Dr. A. P. Krishna, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3*

*Editor :* *Sri M. S. Raghunath Rao, Darbe, Puttur* *Printed at :* *Rajesh Power Press, Darbe - 574 202, Puttur, D. K.*